


ಎಡದಿಂದ ಬಲಕ್ಕೆ

1. ಅಧೀಕ್ಷಕರ ಕಣ್ಣಿಗೆ ಏನೂ ಕಾಣದಂಥ ಕಾರ್ಗತ್ತಲು! 4
3. ಪೂರ್ತಿಯಾಗಿ ಗೋಚರಿಸಿತೇನು ಚಿಟ್ಟೆಯ ಸಂಬಂಧಿ? 3
4. ಜಾರಿ ಬಿದ್ದು ಜಾರಿ ಬಿದ್ದು ಭಾರೀ ಸುಸ್ತು 3
6. ದಾಕ್ಷಿಣ್ಯಕ್ಕೆ ತಲೆ ಬಾಗಿದನೇ ಆ ಸೇನಾಧಿಪತಿ? 4
7. ಮೂರ್ಖರಂತೆ ಚೇಷ್ಟೆ ಮಾಡಿದರೆ ಸುಮ್ಮನೆ ಬಿಟ್ಟೀತೇ ಮೊಸಳೆ? 3
9. ಕೋತಿಯನ್ನು ಬೆದರಿಸಿದ್ದು 'ಕುದುರೆಯ ಕೂಗು' 3
11. ಕಹಿ ಘಟನೆಗಳೇ ತುಂಬಿದ್ದು ಆತ ಬರೆದ ಕಥೆ 3
13. ಅವರು ತೋರುತ್ತಿರುವ ಸ್ಥಳ ಅವರ 'ಅಮ್ಮನ ಮನೆ' 3
15. ಹಾಸಿಗೆಯ ಸುತ್ತಲೇ ಆಡುತ್ತಿದೆ ನೋಡಿ ಆಕಳಿನ ಶಿಶುವಿನಂತಹ ಹಸುಳೆ 4
17. ಕೋಟಿ ಹಣ ಗಳಿಸುವ ಕೆಲಸ ಸುಲಭದ್ದಲ್ಲ 3
18. ಮೇಜಿನ ಮೇಲ್ಭಾಗವನ್ನು ಹೀಗೆ ತೊಳೆಯುವುದೇ? 3
19. ತಪ್ಪೇನನ್ನೂ ಮಾಡದಿರುವಾಗ ಸುಮ್ಮನಿರು 4

ಮೇಲಿನಿಂದ ಕೆಳಕ್ಕೆ

1. ಅಂದಗಾರಿಕೆ ಸಾಧ್ಯ ಹೇಗೆ? ಆತ ವಾಲಿಯ ಮಗ 3
2. ಖಂಜಿರ ನುಡಿಸಲೂ ಕಲಿತಿದ್ದಾನೆ ಆ ಮಡಿವಾಳ 3
3. ಪಂದ್ಯಕ್ಕೇ ಭಾರೀ ಮೌಲ್ಯ ತರುವಂತಿದೆ ಪಾರಿತೋಷಕ 3
5. ನೆರವಾಗಲು ಬಂದವರೇ ಎಲ್ಲವನ್ನೂ ಬೇರೆಡೆಗೆ ಸಾಗಿಸಿದರೇ? 3
7. ಮುಸುಕಿನಲ್ಲಿ ಮರೆಯಾಗಿರುವುದೇ ಆತನ ತಲೆ 3
8. ಜ್ವರ ನಿವಾರಣೆ ಆಗುವ ವೇಳೆಗೆ ರಾತ್ರಿ ಬಂದಿತ್ತು 3
9. ತರಗು ತರಲೇಕೆ ಹೋದಿರಿ? ಅದಕ್ಕೇ ಹೀಗೆ ನವೆ 3
10. ತಿಳಿ ಸಾರು ಮಾಡುವ ದಿನ ಏಕಿಂಥ ಮಾವಿನ ಚಿಗುರು? 3
12. ಹಾದಿಹೋಕರೂ ಪಡೆದ ಉಪಚಾರ ಹೃದಯ ಪೂರ್ವಕ 3
14. ವರದರಾಜನ ಕೃಪೆಯಿಂದ ಇಷ್ಟೊಳ್ಳೇ ಅಭಿವೃದ್ಧಿ 3
15. ಹತ್ತೆಣಿಸುವುದರಲ್ಲಿ ಹಚ್ಚಲು ಸಾಧ್ಯವೇ ಇದೊಂದು ದೀಪ? 3
16. ಸುಮ್ಮನಿರು, ಆ ವಸ್ತುವಿನ ಮೌಲ್ಯ ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ 3

## 24–03–2022 ಉತ್ತರಗಳು

ಎಡದಿಂದ ಬಲಕ್ಕೆ

1. ಅವಸಾನ 3. ಪ್ರಧಾನ 4. ಗಡವ 6. ಲಕ್ಷಾಂತರ 7. ಆವರಣ 8. ಬಲರಾಮ 10. ರಸಗುಲ್ಲ 12. ಅರಿಭಯ 14. ಶಿವಾಲಯ 16. ರುದ್ರಾಕ್ಷಿ 17. ಜವ್ವನೆ 18. ತಪೋವನ

ಮೇಲಿನಿಂದ ಕೆಳಕ್ಕೆ

1. ಅನಲ 2. ನಗರ 3. ಪ್ರಕರಣ 5. ವಕೀಲ 7. ಆಡಂಬರ 9. ಮಹಾಲಯ 11. ಗುಟುಕು 13. ಮರಿಯಾನೆ 14. ಶಿಕ್ಷಿತ 15. ಯಜನ

ಪ್ರಶ್ನಾಂಕಣ

# ಅಂಟಾರ್ಕ್ಟಿಕಾ ಪ್ರವಾಸ: ಏನು ವಿಶೇಷ?

ಅಂಟಾರ್ಕ್ಟಿಕಾ: ಅದು ಧರೆಯ ಏಕೈಕ ಶಾಶ್ವತ ಹಿಮಾವೃತ ಭೂಖಂಡ (ಚಿತ್ರ 1 ಮತ್ತು 2) ಮನುಷ್ಯರು ಶಾಶ್ವತವಾಗಿ ನೆಲೆಸಲು ಕಿಂಚಿತ್ತೂ ಸೂಕ್ತವಲ್ಲದ ಈ ಭೂಖಂಡ ಹಾಗಾದ್ದರಿಂದಲೇ ಯಾವ ರಾಷ್ಟ್ರಕ್ಕೂ ಸೇರದೆ ಇಡೀ ಜಗದ ಸಾರ್ವತ್ರಿಕ ಆಸ್ತಿಯಾಗಿ ಉಳಿದಿದೆ.

ಆದರೂ ಅದೆಷ್ಟೇ ವಾಸಯೋಗ್ಯವಲ್ಲದಿದ್ದರೂ, ಅಂಟಾರ್ಕ್ಟಿಕಾ ಸಂಪೂರ್ಣ ಜನರಹಿತವಾಗಿಲ್ಲ. ನಮ್ಮ ಭಾರತವೂ ಸೇರಿದಂತೆ ವಿವಿಧ ರಾಷ್ಟ್ರಗಳು ಅಲ್ಲಿ ಸ್ಥಾಪಿಸಿರುವ ಸುಮಾರು 70 ವೈಜ್ಞಾನಿಕ ಸಂಶೋಧನಾ ಕೇಂದ್ರಗಳಲ್ಲಿ ಸರಾಸರಿ 4,000 ವಿಜ್ಞಾನಿಗಳೂ ಅವರ ಸಹಾಯಕರೂ ಕಾರ್ಯನಿರತರಾಗಿರುತ್ತಾರೆ. ಜೊತೆಗೆ ಇತ್ತೀಚೆಗೆ ಅಂಟಾರ್ಕ್ಟಿಕಾಗೆ ಹೋಗಿ ಬರುವ ಪ್ರವಾಸಿಗರೂ ಭಾರೀ ಸಂಖ್ಯೆಯಲ್ಲಿದ್ದಾರೆ. ಕಳೆದ ವರ್ಷ ಅಲ್ಲಿನ ಬೇಸಿಗೆಯ ಅವಧಿಯಲ್ಲಿ (ನವೆಂಬರ್ ನಿಂದ ಮಾರ್ಚ್‌ವರೆಗಿನ ಅವಧಿ) ಅಂಟಾರ್ಕ್ಟಿಕಾಗೆ ಭೇಟಿ ನೀಡಿದ ಪ್ರವಾಸಿಗಳ ಸಂಖ್ಯೆ 78,500!

ಇಷ್ಟೂ ಕಾಲ ಅಕ್ಷತವಾಗಿ, ಪರಿಶುದ್ಧವಾಗಿ, ಸ್ಥಿರವಾಗಿ ಉಳಿದಿದ್ದ ಈ ಅನನ್ಯ ಹಿಮಲೋಕದ ಮೇಲೆ ಪ್ರವಾಸಿಗರ ಪರಿಣಾಮಗಳನ್ನು, ಅದರಲ್ಲೂ ವಿಶೇಷವಾಗಿ ಅಂಟಾರ್ಕ್ಟಿಕಾದ ಹಿಮ ಸಂಗ್ರಹದ ಮೇಲಿನ ದುಷ್ಪರಿಣಾಮಗಳನ್ನೂ, ಅವಕ್ಕೆ ಕಾರಣಗಳನ್ನೂ ವಿಜ್ಞಾನಿಗಳು ಸಂಶೋಧಿಸಿದ್ದಾರೆ. ಆ ಕುರಿತ ಅಚ್ಚರಿಯ ವರದಿಯೊಂದು ಪ್ರತಿಷ್ಠಿತ 'ನೇಚರ್ ಕಮ್ಯುನಿಕೇಶನ್ಸ್' ವಿಜ್ಞಾನ ಪತ್ರದಲ್ಲಿ ಕೆಲವೇ ವಾರಗಳ ಹಿಂದೆ ಪ್ರಕಟವಾಗಿದೆ.

ಅಂಟಾರ್ಕ್ಟಿಕಾಗೆ ಪ್ರವಾಸಿಗರು ಹೋಗಲು ಮತ್ತು ವಾಪಸ್ ಬರಲು ಹಡಗುಗಳು ಮತ್ತು ವಿಮಾನಗಳು ಬಳಕೆಯಲ್ಲಿವೆ; ಅಲ್ಲಿನ ಒಳ ಪ್ರದೇಶಗಳನ್ನು ಕಾಣಲು ಹೆಲಿಕಾಪ್ಟರ್ ಮತ್ತಿತರ ನೆಲಗಾಮೀ




ವಾಹನಗಳು ಓಡಾಡುತ್ತವೆ. ಅವಕ್ಕೇ ಅಲ್ಲದೆ ಅಷ್ಟೆಲ್ಲ ಪ್ರವಾಸಿಗಳ ತಂಗು ನೆಲೆಗಳನ್ನು ಬೆಚ್ಚಗಿರಿಸಲು, ಆಹಾರ ತಯಾರಿಸಲು ಮತ್ತು ಇತರೆಲ್ಲ ಅನುಕೂಲಗಳನ್ನು ಒದಗಿಸಲು ಬೃಹತ್ ಪ್ರಮಾಣದಲ್ಲಿ 'ಇಂಧನ'ಗಳು ವ್ಯಯವಾಗುತ್ತವೆ. ಇಂಧನ ಉರಿವಾಗ ಹೊಗೆ ಮತ್ತು ಬೂದಿ ಕಣಗಳು ಹೊರಬೀಳುತ್ತವೆ; ಅವುಗಳಲ್ಲಿನ 'ಇಂಗಾಲ ಕಣಗಳು' ಅಲ್ಲಲ್ಲೇ ತೇಲಿ ಕಡೆಗೆ ಹಿಮಹಾಸಿನ ಮೇಲೆ ಹರಡಿ ನಿಲ್ಲುತ್ತವೆ. ಆಯಾ ಪ್ರದೇಶಗಳಲ್ಲಿ ಹಿಮದ 'ಸೂರ್ಯನ ಬೆಳಕನ್ನು ಪ್ರತಿಫಲಿಸುವ ಸಾಮರ್ಥ್ಯ'ವನ್ನು ತಗ್ಗಿಸುತ್ತವೆ. ಪರಿಣಾಮವಾಗಿ ಅಲ್ಲೆಲ್ಲ ಹೆಚ್ಚು ಸೂರ್ಯರಶ್ಮಿ ಹೀರಲ್ಪಟ್ಟು ನೆಲದ ಹಿಮ ಕರಗಿ ನೀರಾಗಿ ಕಡಲಿಗೆ ತಲುಪುತ್ತದೆ.

ಈ ಎಲ್ಲ ಅಂಶಗಳನ್ನು ಆಧರಿಸಿದ ಸಂಕೀರ್ಣ ಲೆಕ್ಕಾಚಾರದ ಪ್ರಕಾರ ಅಂಟಾರ್ಕ್ಟಿಕಾಗೆ ಹೋಗುವ ಪ್ರತಿಯೊಬ್ಬ ಮನುಷ್ಯನಿಂದಾಗಿ 83 ಟನ್ ಹಿಮ ಕರಗುತ್ತಿದೆ. ಎಂದರೆ ಅಂದಾಜು ವಾರ್ಷಿಕ 80,000 ಮನುಷ್ಯರಿಂದ ಅಂಟಾರ್ಕ್ಟಿಕಾ ಕಳೆದುಕೊಳ್ಳುತ್ತಿರುವ ಹಿಮದ ಮೊತ್ತ ವರ್ಷಕ್ಕೆ ಸಮೀಪ ಅರವತ್ತಾರು ಲಕ್ಷ ಟನ್ ಎಂದಾಯಿತು! ಎಂಥ ಪರಿಣಾಮ! ಅಲ್ಲಿನ ನೆಲದ ಮತ್ತು ಜೀವಜಾಲದ (ಚಿತ್ರ 3) ಮೇಲಿನ ದುಷ್ಪರಿಣಾಮಗಳದೇ ಬೇರೊಂದು ದೀರ್ಘ ಪಟ್ಟಿ.

■ ಎನ್. ವಾಸುದೇವ್